**O.S. 416-23 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 13.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R N D, ವಕೀಲರಿಂದಃ**

7. ನಿಪಿ.1, ಪೇಜ ನಂಃ 8, ಪ್ಯಾರಾ ನಂಃ 8 ರಲ್ಲಿ ಸದರ ಭಾಡೇದ ಕರಾರು ಸದರಿ ಆಸ್ತಿಗಳಲ್ಲಿಯ ಅಂದರೆ ಮೇಲ್ಕಾಣಿಸಿದ ದಕ್ಷಿಣಕ್ಕಿರುವ ಪೂರ್ವ ಕಡೆಯ ಗ್ರೌಂಡ ಫ್ಲೋರ ವ ಅದರ ಮೇಲಿನ ಒಂದು ಮಜಲಿನ ಅಂಗಡಿ ಆಸ್ತಿ ಬಿಟ್ಟು ಉಳಿದ ಯಾವತ್ತೂ ಆಸ್ತಿಗಳ ಅಂದರೆ ಯಾವತ್ತೂ ಮಜಲುಗಳ ಆಸ್ತಿಗಳ ಕುರಿತು ಮಾತ್ರ ಇರುತ್ತದೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಮುಂದುವರೆದು ಸದರಿ ಪ್ಯಾರಾದಲ್ಲಿ ಮೇಲ್ಕಾಣಿಸಿದ 1 ನೇ ಪಕ್ಷದವರಿಗೆ ಕೊಡಬೇಕಾದ ಒಂದು ಅಂತಸ್ತಿನ ಆಸ್ತಿಗೆ ಸಂಬಂಧ ಇರುವುದಿಲ್ಲ ಎಂದು ಬರೆಯಲಾಗಿದೆ ಅಂದರೆ ಸರಿ.

8. ನಿಪಿ.1, ಪ್ಯಾರಾ ನಂಃ 10 ರಲ್ಲಿ 2 ನೇ ಪಕ್ಷದವರು ಸದರಿ ಭಾಡೇದಿಂದ ಕೊಟ್ಟ ಆಸ್ತಿಗಳನ್ನು ಅಥವಾ ಅವುಗಳಲ್ಲಿಯ ಕೆಲವು ಆಸ್ತಿಗಳನ್ನು ಪೋಟ ಭಾಡೇದಿಂದ ಸದರ ಭಾಡೇ ಪತ್ರದ ಕರಾರುಗಳಿಗೆ ಒಳಪಟ್ಟು ಮತ್ತು ಪೋಟ ಭಾಡೇದಿಂದ ಕೊಡುವ ವಿಷಯವನ್ನು 1 ನೇ ಪಕ್ಷದವರಿಗೆ ತಿಳಿಸಿಕೊಡಬಹುದು ಎಂದು ಬರೆಯಲಾಗಿದೆ ಅಂದರೆ ಸರಿ. ನಿಪಿ.1 ನ್ನು ಹಿರಿಯ ವಕೀಲರಾದ ಬಿ ಎಸ್ ನೀಲಕಂಠ, ವಕೀಲರು ತಯಾರು ಮಾಡಿದ್ದಾರೆ ಅಂದರೆ ಸರಿ. ಅದನ್ನು ಬರೆದ ನಂತರ ಅದರಲ್ಲಿರುವ ಶರತ್ತುಗಳನ್ನು ಆಗಿನ ಮಾಲಿಕರು ಹಾಗೂ ಭಾಡಿಗೇದಾರರು ಓದಿ ಸಹಿ ಮಾಡಿದ್ದಾರೆ ಅಂದರೆ ಸರಿ.

9. ನಿಪಿ.1 ಬರೆದು, ಸಹಿ ಮಾಡಿ ನೋಂದ ಮಾಡಿಸಿದ ನಂತರ ಅದರ ವ್ಯವಹಾರ ಅಂತಿಮ ಅಂದರೆ ಸರಿ. ಯಾರಾದರೂ ಶರತ್ತುಗಳನ್ನು ಉಲ್ಲಂಘನೆ ಮಾಡಿದರೆ ನೋಟಿಸು ಕೊಟ್ಟ ಕಾನೂನು ಕ್ರಮ ಜರುಗಿಸಬೇಕೆಂದರೆ ಸರಿ. ನಿಪಿ.1 ಪ್ಯಾರಾ ನಂಃ 3 ರಲ್ಲಿ 13 ಇಂಟು 30 ಗ್ರೌಂಡ ಪ್ಲೋರ ಹಾಗೂ 1 ನೇ ಅಂತಸ್ಸಿನಲ್ಲಿ ಕರಾರಿನ ಪ್ರಕಾರ ಕಟ್ಟಡ ಕಟ್ಟಿ ಕೊಟ್ಟಿಲ್ಲ. ಹಾಗೂ ಅದರ ಬಗ್ಗೆ ಬೇರೆ ಕಾಗದ ಮಾಡಿಲ್ಲ ಹಾಗೂ ನೋಟಿಸು ಕೊಟ್ಟಿಲ್ಲ ಮತ್ತು ಅದನ್ನು ಹಾಜರಪಡಿಸಿಲ್ಲ. ನಿಡಿ.8, ನೀಲನಕ್ಷೆಯಲ್ಲಿ 13 ಇಂಟು 30 ರ ಕಟ್ಟಡ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ಮೂಲ ಮಾಲಿಕ ಕರಾರು ಪ್ರಕಾರ ಕಟ್ಟಡ ಕಟ್ಟಿಕೊಟ್ಟಿಲ್ಲವೆಂದು ನೋಟಿಸು ಕೊಟ್ಟಿಲ್ಲ.

**O.S. 416-23 PW : 1**

ಭಾಡಿಗೇದಾರ ಕರಾರಿನ ಪ್ರಕಾರ 13 ಇಂಟು 30 ರ ಅಳತೆಯ ಗ್ರೌಂಡ ಹಾಗೂ 1 ನೇ ಮಹಡಿಯಲ್ಲಿ ಕಟ್ಟಡ ಕಟ್ಟಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ, ಹೇಳುತ್ತಾರೆ, ಕಟ್ಟಡ ಕಟ್ಟುವಾಗ ನಾವು ಎರಡನೇ ದಾಖಲೆ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಿಡಿ.8 ರಲ್ಲಿ ತೋರಿಸಿದ ಕಟ್ಟಡವನ್ನು ನಿಪಿ.1 ಆದ ನಂತರ 1982 ರಲ್ಲಿ ಕಟ್ಟಿದ್ದಾರೆ ಅಂದರೆ, ಕಟ್ಟಿಕೊಂಡು ಬಂದಿದ್ದಾರೆಂದು ಹೇಳುತ್ತಾರೆ. ನಿಪಿ.1 ಆಗುವಾಗ ನಾನು ಜನಿಸಿರಲಿಲ್ಲ. 13 ಇಂಟು 30 ರ ಅಳತೆಯ ಕಟ್ಟಡವನ್ನು ನಮ್ಮ ಅಜ್ಜ ಮೂಲ ಮಾಲಿಕನಿಗೆ ಮೂಲ ಭಾಡಿಗೆದಾರ ಕಟ್ಟಿಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ. ಈ ಕೇಸ ಹಾಗೂ ಕೆಳ ನ್ಯಾಯಾಲಯದಲ್ಲಿ ಕೇಸ್ ಹಾಕುವಾಗ ಇದ್ದ ದಾಖಲೆಗಳು ನಮ್ಮ ಬಳಿ ಇವೆ. ಇದ್ದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಿದ್ದೇನೆ. ಹಾಜರಪಡಿಸಿದ ದಾಖಲೆಗಳನ್ನು ಹೊರತುಪಡಿಸಿ, ನಮ್ಮ ಬಳಿ ಬೇರೆ ದಾಖಲೆಗಳಿಲ್ಲ. ನಿಡಿ.8 ರಲ್ಲಿ ಸೆಲ್ಲರ ದಲ್ಲಿ ಪಾರ್ಕಿಂಗ್ ಅಳವಡಿಸಿಕೊಳ್ಳುವ ಸಲುವಾಗಿ 13 ಇಂಟು 30 ರ ನೆಲ ಸಮ ಹಾಗೂ 1 ನೇ ಮಹಡಿಯಲ್ಲಿ ಕಟ್ಟಡ ಕಟ್ಟಿಲ್ಲ ಹಾಗೂ ಕೊಟ್ಟಿಲ್ಲ ಅಂದರೆ, ಕಟ್ಟಡವಾಗುವ 2 ನೇ ದಾಖಲೆ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. 2 ನೇ ದಾಖಲೆ ಮಾಡುವಾಗ ನಾನು ಅಲ್ಪವಯಿಯಾಗಿದ್ದೆನು. ನಿಪಿ.10 ನೋಂದಣಿಯಾಗಿಲ್ಲ ಅಂದರೆ ಸರಿ. ನಿಪಿ.10 ರ ಪತ್ರ 26 ವರ್ಷ 8 ತಿಂಗಳ ಅವಧಿಗೆ ಇದೆ ಅಂದರೆ ಸರಿ. ನಿಪಿ.10 ಶಿರೋನಾಮೆ ಯಲ್ಲಿ ನಿಪಿ.1 ಮುಂದುವರೆದ ಭಾಗವೆಂದು ಬರೆದಿಲ್ಲ. ಆದರೆ ಒಳಗಡೆಗೆ ಬರೆದಿರುತ್ತಾರೆ. ಕೊನೆಯ ಪುಟದಲ್ಲಿ ಈ ಪ್ರಕಾರ 1 ನೇ ವ ಹಾಗೂ 2 ನೇ ಪಕ್ಷದವರು ತಮ್ಮ ತಮ್ಮ ಆತ್ಮ ಸಂತೋಷದಿಂದ ಮಾಡಿಕೊಂಡ ಭಾಡಿಗೆ ಕರಾರು ಪತ್ರವೆಂದು ಬರೆಯಲಾಗಿದೆ. ನಿಪಿ.1 ರ ಮುಂದುವರೆದ ಪುರವಣಿ ಪತ್ರವೆಂದು ನಿಪಿ.10 ರಲ್ಲಿ ಬರೆದಿಲ್ಲ, ಬೇರೆ ರೀತಿ ಬರೆದಿದ್ದಾರೆ. ನಿಪಿ.10, 13 ಇಂಟು 30 ರ ಅಳತೆಯ ನೆಲಸಮ ಹಾಗೂ 1 ನೇ ಮಹಡಿ ಆಸ್ತಿಯ ಭಾಡಿಗೆ ಸಲುವಾಗಿ ಮಾಡಲಾಗಿ ೆ ಅಂದರೆ ಸರಿ. 13 ಇಂಟು 30 ರ ಅಳತೆಯ ನೆಲಸಮ ಹಾಗೂ 1 ನೇ ಮಹಡಿಯಲ್ಲಿ ಕಟ್ಟಡ ಕಟ್ಟಿ ನನ್ನ ಅಜ್ಜನವರಿಗೆ ಮೂಲ ಭಾಡಿಗೆದಾರ ಕೊಟ್ಟ ದಾಖಲೆ ಹಾಜರಪಡಿಸಿಲ್ಲ.

**O.S. 416-23 PW : 1**

4. ನಿಪಿ.10 ರಲ್ಲಿ 1 ನೇ ಪುಟದಲ್ಲಿ ಕೊನೆಯ ಭಾಗದಲ್ಲಿ ಗ್ರೌಂಡ ಫ್ಲೋರ ಆಸ್ತಿ ವ ಅದರ ಮೇಲೆ ಒಂದು ಮಜಲು (ನಿರ್ದಿಷ್ಟ ಜಾಗೆಯ ) ಲಿಯ ಒಂದು ಮಜಲಿನ ಆಸ್ತಿ 1 ನೇ ಪಕ್ಷದವರ ಕಬ್ಜೆಯಲ್ಲಿ ಮಾಲ್ಕಿನಾತೆಯಿಂದ ಇರುತ್ತದೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಅದರ ಕಬ್ಜೆಯ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಈ ಜಾಗದ ಬಗ್ಗೆ ನಮ್ಮ ಅಜ್ಜ ಆಸ್ತಿ ಕರ ಕಟ್ಟಿದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಏಕೆಂದರೆ, ಇನ್ನು ಕಟ್ಟಡ ಕಟ್ಟುವ ಸ್ಥಿತಿಯಲ್ಲಿತ್ತು. 13 ಇಂಟು 30 ರ ಅಳತೆಯ ನೆಲಸಮ 1 ನೇ ಅಂತಸ್ತು ಆಸ್ತಿ 1 ನಪಕ್ಷದವರ ಮಾಲ್ಕಿ ಕಬ್ಜೆ ಇರುತ್ತದೆ ಅಂತಾ ಬರವಣಿಗೆ ಹಾಗೂ ವಿಷಯ ತಪ್ಪು ಇರುತ್ತದೆ ಅಂದರೆ ಸರಿಯಲ್ಲ. ಯಾವುದೇ ಕಟ್ಟಡ ಅಸ್ತಿತ್ವದಲ್ಲಿದ್ದರೆ ಭಾಡಿಗೆ ಪತ್ರವಾಗುತ್ತೆ ಅಂದರೆ ಸರಿ..

5. ನಿಪಿ.10 2 ನೇ ಪೇಜದಲ್ಲಿ ಭಾಡೆ ಕರಾರುದಿಂದ ಕೊಟ್ಟ ಆಸ್ತಿಯ ಪೈಕಿ ಪೂರ್ವ ಕಡೆಯ ದಕ್ಷಿಣಕ್ಕಿರುವ ಹುಬ್ಬಳ್ಳಿ-ಧಾರವಾಡ ರಸ್ತೆಗೆ ಹೊಂದಿ ಇದ್ದ ಆರ್ ಸಿ ಸಿ ಅಂಗಡಿ ಇದರ ಅಳತೆ ಪೂರ್ವ – ಪಶ್ಚಿಮ ಃ 13, ಉತ್ತರ – ದಕ್ಷಿಣ 30 ಅಳತೆಯ ಇದ್ದ ಒಂದು ಮಜಲಿನ ಅಂಗಡಿಯ ಆಸ್ತಿಯೂ 1 ನೇ ಪಕ್ಷದವರ ಮಾಲ್ಕಿ ವಹಿವಾಟ ದಲ್ಲಿಯ ಆಸ್ತಿ ಇದ್ದು ಅಂತಾ ಬೆಯಲಾಗಿದೆ ಅಂದರೆ ಸರಿ. ಮುಂದುವರೆದು, ಸದರ ಆಸ್ತಿಯನ್ನು 1 ನೇ ಪಕ್ಷದವರಿಂದ 2 ನೇ ಪಕ್ಷದವರು ಮಾಸಿಕ ಭಾಡಿಗೆದಾರನಾತೆಯಿಂದ 26 ವರ್ಷಗಳು 7 ತಿಂಗಳಗಳಿಂದ 29 ದಿವಸ ಅಂದರೆ, 26 ವರ್ಷ 8 ತಿಂಗಳು ಮಟ್ಟಿಗೆ ಭಾಡೇ ದಿಂದ ಹಿಡಿಯಲು ಒಪ್ಪಿಕೊಂಡಿದ್ದಾರೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಮೂಲ ಮಾಲಿಕರು ಹಾಗೂ ಭಾಡಿಗೆದಾರರು ಸಿಟಿ ಎಸ್ ನಂಃ 136 ಬಿ ಅಡಿಯಲ್ಲಿ 13 ಇಂಟು 30 ಅಳತೆಯ ಕಟ್ಟಡ ಕಟ್ಟಿಲ್ಲ, ಪರವಾನಿಗೆ ಸಿಕ್ಕಿಲ್ಲ, ಆ ಕಾರಣದಿಂದ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಿಪಿ.10 ನೋಂದವಾಗುವ ಕಾಗದ ಅಂದರೆ, ಆಗಬಹುದು . ನಿಪಿ.10 ನ್ನು ನಾವೇ ಹಾಜರಪಡಿಸಿದ್ದೇವೆ. ನಿಫಿ.10 ಮೂಲ ಮಾಲಿಕರು ಗುರುಬಸಪ್ಪ ರವರ ಬಳಿಯಲ್ಲಿ ಇದ್ದಿದ್ದು, ಅದು ವಾದಿಗಳ ಬಳಿ ಬಂದಿದೆ ಅಂದರೆ ಸರಿ. ನಿಪಿ.10 ನ್ನು ಗುರುಬಸಪ್ಪ ತನ್ನ ಜೀವಿತ ಕಾಲದಲ್ಲಿ ನೋಂದ ಮಾಡಿಸಿಕೊಡಿ ಅಂತಾ ಮೂಲ ಭಾಡಿಗೆದಾರನಿಗೆ ನೋಟಿಸ ಕೊಟ್ಟ ಬಗ್ಗೆ ಹಾಜರಾಪಡಿಸಿಲ್ಲ.

6. ಗುರುಬಸಪ್ಪ ಬೆಳಗಾವಿ ರವರಿಗೆ ಸಂಬಂಧಪಟ್ಟ ಆಸ್ತಿಗಳು ಬಹಳಷ್ಟು ಹುಬ್ಬಳ್ಳಿಯಲ್ಲಿವೆ ಅಂದರೆ ಸರಿ. ಗುರುಬಸಪ್ಪ ಬೆಳಗಾವಿ ರವರು ತಮ್ಮ ಆಸ್ತಿಗೆ ಸಂಬಂಧಪಟ್ಟಂತೆ ಅನೇಕ ಭಾಡಿಗೆದಾರರ ಜೊತೆಗೆ ಭಾಡಿಗೆ ಪತ್ರ ಮಾಡಿಸಿಕೊಂಡಿದ್ದಾರೆ ಅಂದರೆ ಸರಿ. 2008 ಮಾರ್ಚ ನೇ 28 ರಲ್ಲಿ ಗುರುಬಸಪ್ಪ ಬೆಳಗಾವಿ ರವರು ಮರಣ ಹೊಂದಿದ್ದಾರೆ.

**O.S. 416-23** **PW : 1**

ನಿಪಿ.10, ಪೇಜ ನಂಃ 3, ಪ್ಯಾರಾ ನಂಃ 5-ಎ ರಲ್ಲಿ ಇದರ ಅಳತೆ ಪೂರ್ವ – ಪಶ್ಚಿಮ ಃ 22 ಪೂಟು 6 ಇಂಚು ಃ ಉತ್ತರ – ದಕ್ಷಿಣ ಃ 12 ಪೂಟು 6 ಇಂಚು ಅಳತೆಯುಳ್ಳ ಕಟ್ಟಿದ ಅಂಗಡಿಯನ್ನು 2 ನೇ ಪಕ್ಷದವರು 1 ನೇ ಪಕ್ಷದವರಿಗೆ ಕಬ್ಜಾ ಕೊಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಅದೇ ರೀತಿ ಅಜಮಾಸು ಪೂರ್ವ – ಪಶ್ಚಿಮ 4 ಪೂಟು 6 ಇಂಚು ಮತ್ತು ಅಜಮಾಸ ಉತ್ತರ – ದಕ್ಷಿಣ 8 ಪೂಟವುಳ್ಳ ಅಂಗಡಿಯನ್ನು 1 ನೇ ಪಕ್ಷದವರಿಗೆ ಕೊಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಅದೇ ರೀತಿ ಪ್ಯಾರಾ ನಂಃ 5 ಸಿ ಯಲ್ಲಿ ಪೂರ್ವ – ಪಶ್ಚಿಮ 10 ಪೂಟು, ಉತ್ತರ – ದಕ್ಷಿಣ 15 ಅಳತೆಯುಳ್ಳದ್ದುನ್ನು ಇಂದಿನಿಂದ 5 ವರ್ಷಗಳ 1 ನೇ ಪಕ್ಷದವರಿಗೆ ಕಟ್ಟಿಸಿಕೊಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಅಸಲು ದಾವೆ ನಂಃ 415/23 ರ ನಿಡಿ.8 ರಲ್ಲಿ ಮೇಲೆ ಹೇಳಿದ ಅಳತೆಯ ಕಟ್ಟಡವನ್ನು ತೋರಿಸಿಲ್ಲ.

7. ಯಾವುದೇ ಒಂದು ಭಾಡಿಗೆ ಪತ್ರವಾಗಬೇಕಾದರೆ ಕಟ್ಟಡ ಕಟ್ಟಿ ಅಸ್ತಿತ್ವದಲ್ಲಿದ್ದರೆ ಆಗುತ್ತವೆ ಅಂದರೆ, ಕಟ್ಟಡ ಕಟ್ಟುವದಗಿಂತ ಮುಂಚೆನೂ ಸಹ ಭಾಡಿಗೆ ಪತ್ರವಾಗುತ್ತವೆ, ಕಟ್ಟಿದ ನಂತರ ಸಹ ಭಾಡಿಗೆ ಪತ್ರವಾಗುತ್ತವೆ. ನಿಪಿ.10 ಪ್ಯಾರಾ ನಂಃ 5, ಎ ದಿಂದ ಸಿ ಗಳಲ್ಲಿ ಕಟ್ಟಡ ಕಟ್ಟಿ ಮೂಲ ಭಾಡಿಗೆದಾರ ಮಾಲಿಕನಿಗೆ ಕೊಟ್ಟ ನಂತರ ಭಾಡಿಗೆ ಪ್ರಾರಂಭವಾಗುತ್ತದೆ ಅಂತಾ ಬರೆಯಲಾಗಿದಿಯಾ ಎಂಬ ವಕೀಲರ ಪ್ರಶ್ನೆಗೆ ನನಗೆ ಗೊತ್ತಾಗುವುದಿಲ್ಲವೆಂದು ಹೇಳುತ್ತಾರೆ. ನಿಪಿ.10 ರಲ್ಲಿ ಪೇಜ -2 ಪ್ಯಾರಾ ನಂಃ 3 ರಲ್ಲಿ ಸದರ ಆಸ್ತಿಯ ಪ್ರತಿ ತಿಂಗಳು ಭಾಡೆಯೂ ಮೂವತ್ತು ಸಾವಿರ ರೂ. ಇರುತ್ತದೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಮುಂದುವರೆದು ದಿಃ 01.01.1996 ರಿಂದ ದಿಃ 31.12.1996 ರವರೆಗೆ ಪ್ರತಿ ತಿಂಗಳು ಹತ್ತು ಸಾವಿರ ರೂ. ಗಳು ಅಂತಾ ಬರೆಯಲಾಗಿದೆ ಅಂದರೆ ಸರಿ. ನಿಪಿ.10 ಪೇಜ ನಂಃ 2, ಪ್ಯಾರಾ ನಂಃ 3 ರಲ್ಲಿ ಬರೆದಿದ್ದು ನಿಜವಿರುತ್ತದೆ. ನಿಪಿ.10 ರಲ್ಲಿ ಪ್ಯಾರಾ ನಂಃ 5-ಎ ದಿಂದ ಸಿ ಗಳಲ್ಲಿ ತೋರಿಸಿದ ಕಟ್ಟಡಗಳು ಅಸ್ತಿತ್ವದಲ್ಲಿದಿದ್ದರೂ ಸಹ ಭಾಡಿಗೆ ಪ್ರಾರಂಭ ಮಾಡಿದ್ದೇವೆ ಅಂದರೆ ಸರಿಯಲ್ಲ. ನಿಪಿ.5-ಎ ದಿಂದ ಸಿ ವರೆಗೆ ತೋರಿಸಿದ ಕಟ್ಟಡಗಳು ಭಾಡಿಗೆದಾರ ನಮಗೆ ಕಟ್ಟಿಸಿಕೊಡಬೇಕು. ನಿಪಿ.1 ರಲ್ಲಿ 13 ಇಂಟು 30 ಅಡಿ ಕಟ್ಟಡದ ಬದಲಾಗಿ, ನಿಪಿ.10 ರಲ್ಲಿ ಪ್ಯಾರಾ ನಂಃ 5 -ಎ ದಿಂದ ಸಿ ವರೆಗೆ ಕಟ್ಟಡವನ್ನ ಕಟ್ಟಿಸಿಕೊಡಬೇಕೆಂದು ಬರೆದಿರುವುದಿಲ್ಲ ಅಂದರೆ ಸರಿಯಲ್ಲ.

**O.S. 416-23 PW : 1**

ನಿಪಿ.10, ಪ್ಯಾರಾ ನಂಃ 8 ರಲ್ಲಿ ಭಾಡೆ ಕರಾರು ವ ಮಾಸಿಕ ಭಾಡೆ ಬೇರೆ ಬೇರೆಯಾಗಿದ್ದು, ಅವುಗಳನ್ನು 2 ನೇ ಪಕ್ಷದವರು 1 ನೇ ಪಕ್ಷದ ಮಾಲಿಕರಿಗೆ ಪ್ರತ್ಯೇಕವಾಗಿ ಕೊಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ನಿಪಿ.1 ರಲ್ಲಿ ತೋರಿಸಿದ 13 ಇಂಟು 30 ಅಡಿ ಕಟ್ಟಡದ ಬದಲಾಗಿ, ನಿಪಿ.10 ರ ಪ್ಯಾರಾ ನಂಃ 5 ರಿಂದ ಎ ದಿಂದ ಸಿ ವರೆಗೆ ಕಟ್ಟಡವನ್ನು ಕಟ್ಟಿಕೊಡಬೇಕೆಂದು ನಿಖರವಾಗಿ ಬರೆದಿಲ್ಲ. ನಿಪಿ.10 ಪ್ಯಾರಾ ನಂಃ 5 -ಎ ದಿಂದ ಸಿ ವರೆಗಿನ ಕಟ್ಟಡದ ಬಗ್ಗೆ ಭಾಡಿಗೆ ಪತ್ರ ನೋಂದವಾಗಬೇಕು ಅಂದರೆ ಸರಿ. ನಮ್ಮ ಅಜ್ಜ ಗುರುಬಸಪ್ಪ ಮೂಲ ಮಾಲಿಕ ಮೂಲ ಭಾಡಿಗೆದಾರರಿಗೆ ಮೇಲೆ ಹೇಳಿದ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ನೋಟಿಸು ಕೊಟ್ಟಿಲ್ಲ ಹಾಗೂ ಕೇಸ ಹಾಕಿಲ್ಲ. 2008 ರಲ್ಲಿ ನನ್ನ ಅಜ್ಜ ಮರಣ ಹೊಂದಿದಾಗ ನನ್ನ ವಯಸ್ಸು 18 ವರ್ಷ. 1 ನೇ ವಾದಿಯ ವಯಸ್ಸು 40 ಇರಬಹುದು. ವಾದಿಗಳು ನಿಪಿ.10 ರ ಪ್ರಕಾರ ಕಟ್ಟಡ ಕಟ್ಟಿಕೊಟ್ಟಿಲ್ಲವೆಂದು ನೋಟಿಸು ಕೊಟ್ಟಿಲ್ಲ ಹಾಗೂ ಕೇಸ ಹಾಕಿಲ್ಲ. ನಿಪಿ.10, ಪ್ಯಾರಾ ನಂಃ 5 -ಎ ದಿಂದ ಸಿ ರಲ್ಲಿ ತೋರಿಸಿದ ಕಟ್ಟಡವನ್ನು ಕಟ್ಟಿ ನಮಗೆ ಕೊಟ್ಟ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಪಾರ್ಕಿಂಗ ಮಾಡುವ ಸಲುವಾಗಿ ಮಹಾನಗರ ಪಾಲಿಕೆಯವರು ನೆಲ ಸಮ ಹಾಗೂ 1 ನೇ ಅಂತಸ್ತು 13 ಇಂಟು 30 ಅಡಿ ಕಟ್ಟಡ ಕಟ್ಟಲು ಪರವಾನಿಗೆ ನೀಡಿಲ್ಲ ಅಂದರೆ ಗೊತ್ತಿಲ್ಲ.

8. ನಿಡಿ.8 ರಲ್ಲಿ ತೋರಿಸಿದ ಪರವಾನಿಗೆಯಂತೆ ನಿಡಿ.9 ಹಾಗೂ 10 ರಲ್ಲಿ ಕಟ್ಟಡ ಕಟ್ಟಿದ್ದಾರೆ ಅಂದರೆ ಸರಿಯಲ್ಲ. ನಿಪಿ.7 ಹಾಗೂ 8 ರಲ್ಲಿ ತೋರಿಸಿದಂತೆ ಕಟ್ಟಡ ಕಟ್ಟಲಾಗಿದೆ ಅಂದರೆ ಸರಿ. ನಿಡಿ.8 ರ ಪರವಾನಿಗೆಯಂತೆ ನಿಪಿ.7 ಹಾಗೂ 8 ರಲ್ಲಿ ತೋರಿಸಿದ ಕಟ್ಟಡ ಕಟ್ಟಿದ್ದಾರೆ ಅಂದರೆ ಗೊತ್ತಿಲ್ಲ. ನಿಪಿ.7, ನೆಲ ಮಹಡಿಯಲ್ಲಿ ಹಾಗೂ ನಿಡಿ.9 ಅಸಲು ದಾವೆ ನಂಃ 415-23 ರಲ್ಲಿಯ ಕುಂಕಮ ಎಜೆನ್ಸಿ ಎನ್ನುವ ಕಟ್ಟಡದ ಭಾಗ ನಮ್ಮ ಕಬ್ಜಾದಲ್ಲಿದೆ ಅಂದರೆ ಸರಿ. ನಿಪಿ.7 ಹಾಗೂ ಅಸಲು ದಾವೆ ನಂಃ 415-23 ರಲ್ಲಿರುವ ನಿಡಿ.9 ರಿಂದ 11 ಗಳ ಫೋಟೋದಲ್ಲಿರುವ ಎಸ್ ಎಸ್ ಟೂರಿಸ್ಟ ಅಂತಾ ತೋರಿಸಿದ ಕಟ್ಟಡ ಅಸಲು ದಾವೆ ನಂಃ 415-23 ರ ವಾದಿ ನಂಃ 2 ರವರ ಕಬ್ಜಾದಲ್ಲಿದೆ ಅಂದರೆ ಗೊತ್ತಿಲ್ಲ. ವಾದಿ ನಂಃ 2 ರವರ ಹೆಸರು ಶ್ರೀಶೈಲ ಅಂದರೆ ಸರಿ. ಅಸಲು ದಾವೆ ನಂಃ 415-23 ರ ನಿಡಿ.11 ರಲ್ಲಿ ಕಾಣುವ ಫೋಟೋ ಶ್ರೀಶೈಲ ರವರ ಅಜ್ಜನದು ಅಂದರೆ ಗೊತ್ತಿಲ್ಲ.

**O.S. 416-23 PW : 1**

9. ಮೂಲ ಭಾಡಿಗೆದಾರ ಅಂದಾಜು ಪರವಾನಿಗೆ ಪಡೆದು ಎಷ್ಟು ವರ್ಷಗಳವರೆಗೆ ಕಟ್ಟಡ ಕಟ್ಟಿದ್ದಾರೆಂದು ದಾಖಲೆ ಹಾಜರಪಡಿಸಿಲ್ಲ. ಮಹಾನಗರ ಪಾಲಿಕೆಯವರು ಒಮ್ಮೆ ಪರವಾನಿಗೆ ಕೊಟ್ಟ ನಂತರ ನವೀಕರಣ ಮಾಡಲು ಪುನಃ ಪರವಾನಿಗೆ ಪಡೆಯಬೇಕಾಗುತ್ತದೆ ಅಂದರೆ ಗೊತ್ತಿಲ್ಲ. ಸಿಟಿ ಸರ್ವೆ ನಂಃ 136 ಬಿ ರಲ್ಲಿ ಭಾಡಿಗೆದಾರ ಪೂರ್ಣ ಕಟ್ಟಡ ಇಲ್ಲಿಯವರೆಗೆ ಕಟ್ಟಿಲ್ಲ ಅಂದರೆ ಸರಿ. ದಾವಾ ಆಸ್ತಿಯಲ್ಲಿ ಮೂಲ ಭಾಡಿಗೆದಾರ, ಭಾಗೀದಾರ ಸಂಸ್ಥೆಯಿಂದ ವ್ಯವಹಾರ ಮಾಡುತ್ತಾರೆ ಅಂದರೆ ಗೊತ್ತಿಲ್ಲ. ಮೂಲ ಭಾಡಿಗೆದಾರನಿಗೆ 3 ಜನ ಗಂಡು ಮಕ್ಕಳು, ಹೆಣ್ಣು ಮಕ್ಕಳು ಹಾಗೂ ಹೆಂಡತಿ ಇದ್ದಾರೆ ಅಂದರೆ ಗೊತ್ತಿಲ್ಲ. ಮೂಲ ಭಾಡಿಗೆದಾರ, ಮಾಲ್ಕಿನಾತೆಯಿಂದ ವ್ಯವಹಾರ ಮಾಡುತ್ತಾನೆ ಅಂತಾ ದಾಖಲೆ ಹಾಜರಪಡಿಸಿಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.